ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ
ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ
ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ - 576 213

ಕರಾವಳಿ ಕೃಷಿ

ತ್ರೈಮಾಸಿಕ ಕೃಷಿಕರ ವಾರ್ತಾ ಪತ್ರಿಕೆ

ಜುಲೈ–ಸೆಪ್ಟೆಂಬರ್ 2021 ಸಂಪುಟ–11, ಸಂಚಿಕೆ–2

ವಿಶ್ವ ಕ್ಷೀರ ದಿನದಂದು ಒಂದು ದಿನದ ಅಂತರ್ಜಾಲ ತರಬೇತಿ ಕಾರ್ಯಕ್ರಮ

ಹೈನುಗಾರಿಕೆಯು ಕೃಷಿಯ ಅವಿಭಾಜ್ಯ ಅಂಗವಾಗಿದ್ದು ಗ್ರಾಮೀಣ ಪ್ರದೇಶದ ಜನಸಾಮಾನ್ಯನ ದೈನಂದಿನ ಜೀವನದ ಆರ್ಥಿಕ ಸ್ಥಿತಿಗತಿಗೆ ಮುಖ್ಯ ಆಧಾರವಾಗಿರುವ ಕಸುಬಾಗಿದೆ. ಹೈನುಗಾರಿಕೆಯಲ್ಲಿ ಶುದ್ದ ಹಾಲು ಉತ್ಪಾದನೆ ಮಾಡುವುದು ಮತ್ತು ಅದರ ಗುಣಮಟ್ಟ ಕಾಯ್ದುಕೊಳ್ಳುವುದು ಅತೀ ಅವಶ್ಯವೆಂದು ಜನಸಾಮಾನ್ಯರಿಗೆ ಮನದಟ್ಟು ಮಾಡುವ ಉದ್ದೇಶದಿಂದ ಭಾರತ ಅಮೃತ ಮಹೋತ್ಸವದ ಅಂಗವಾಗಿ ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರದಿಂದ 75 ವಿವಿಧ ಕಾರ್ಯಕ್ರಮಗಳನ್ನು ವರ್ಷವಿಡಿ ಹಮ್ಮಿಕೊಂಡಿದ್ದು ಅದರ ಆಯ್ದ ಭಾಗವಾಗಿ ದಿನಾಂಕ 01.06.2021 ರಂದು ವಿಶ್ವ ಕ್ಷೀರ ದಿನಾಚರಣೆ ದಿನದಂದು ಒಂದು ದಿನದ ಅಂತರ್ಜಾಲ ತರಬೇತಿ ಕಾರ್ಯಕ್ರಮವನ್ನು ಶುದ್ದ ಹಾಲು ಉತ್ಪಾದನೆ ಮತ್ತು ಹಾಲಿನ ಗುಣಮಟ್ಟದ ನಿರ್ವಹಣೆ ಶಿರ್ಷಿಕೆಯಡಿಯಲ್ಲಿ ಜಿಲ್ಲೆಯ ಸಮಸ್ತ ರೈತರಿಗೆ ಉಪಯೋಗವಾಗಲೆಂದು ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರ ಮತ್ತು ಪಶುಸಂಗೋಪನಾ ಇಲಾಖೆ ಜಂಟಿಯಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತೆಂದು ಕಾರ್ಯಕ್ರಮದ ಸಂಯೋಜಕರಾದ ಶ್ರೀನಿವಾಸ ಹೆಚ್. ಹುಲಕೋಟಿ, ವಿಜ್ಞಾನಿಗಳು(ಮತ್ಸ್ಯ ವಿಜ್ಞಾನ) ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಬಿ. ಧನಂಜಯ ರವರು ವಿಶ್ವ ಕ್ಷೀರ ದಿನಾಚರಣೆಯನ್ನು ಪ್ರತಿ ವರ್ಷ ಜೂನ್ ತಿಂಗಳ ಮೊದಲನೆಯ ದಿನವೇ ಯಾಕೆ ಆಚರಿಸಲಾಗುತ್ತದೆ, ಯಾವ ವರ್ಷದಿಂದ ಆಚರಣೆಯಲ್ಲಿದೆ ಎಂದು ತಿಳಿಸಿಕೊಡುತ್ತಾ ಕ್ಷೀರ ಕ್ರಾಂತಿಯಲ್ಲಿ ಡಾ. ವರ್ಗಿಸ್ ಕುರಿಯನ್ ರವರ ಪಾತ್ರವನ್ನು ಶ್ಲಾಗಿಸಿ ಈ ಸಂದರ್ಭದಲ್ಲಿ ಅವರ ಕೊಡುಗೆಯನ್ನು ಹಂಚಿಕೊಳ್ಳುವ ಮುಖಾಂತರ ಅವರನ್ನು ಗೌರವಿಸಿದರು.



ಪಶುಸಂಗೋಪನಾ ಇಲಾಖೆಯ ಉಪನಿರ್ದೇಶಕರಾದ ಡಾ.ಹರೀಶ್ ತಮಣ್ಕರ್ ರವರು ಶುದ್ದ ಹಾಲು ಉತ್ಪಾದನೆ ಮತ್ತು ಹಾಲಿನ ಗುಣಮಟ್ಟದ ನಿರ್ವಹಣೆ ಬಗ್ಗೆ ಮಾತನಾಡಿ ರೈತರಿಗೆ ಸಂಪೂರ್ಣ ಮಾಹಿತಿ ಕೊಟ್ಟು ವರ್ಷದಿಂದ ವರ್ಷಕ್ಕೆ ಹಾಲಿನ ಉತ್ಪಾದನೆ ಹೆಚ್ಚುತ್ತಿದ್ದು ಹಾಲಿನ ಉತ್ಪಾದನೆಯಲ್ಲಿ ನಮ್ಮ ದೇಶ ನಂಬರ್ 1 ಸ್ಥಾನದಲ್ಲಿದೆ, ಹಾಲಿನ ಉತ್ಪಾದನೆಯಲ್ಲಿ ಇರುವ ಬೆಳವಣಿಗೆ ಬೇರೆ ಯಾವ ಉದ್ಯಮದಲ್ಲೂ ಇಲ್ಲ ಎಂದರು. ಹಾಲು ಎಲ್ಲ ವಯಸ್ಸಿನವರಿಗೂ ಒಂದು ಸಂಪೂರ್ಣ ಆಹಾರವೆಂದರು. ಹಾಲನ್ನು ಹೇಗೆ ಹಿಂಡಬೇಕು, ಹೈನುಗಾರಿಕೆಯಲ್ಲಿ ಕೊಟ್ಟಿಗೆ, ಪಶುಗಳ ಮತ್ತು ವೈಯಕ್ತಿಕ ಶುಚಿತ್ವ ಎಷ್ಟು ಮುಖ್ಯ, ಕೆಚ್ಚಲುಬಾವು ಯಾಕೆ ಬರುತ್ತದೆ, ಬಂದಾಗ ಏನು ಮಾಡಬೇಕು, ಬರದೇ ಇರುವ ಹಾಗೆ ಏನು ಮಾಡಬೇಕು, ಹೇಗೆ ಎಚ್ಚರ ವಹಿಸಬೇಕು ಮತ್ತು ಅದಕ್ಕೆ ಅನುಸರಿಸಬೇಕಾದ ಸರಳ ವಿಧಾನವನ್ನು ರೈತರಿಗೆ ಅರ್ಥವಾಗುವ ರೀತಿಯಲ್ಲಿ ಚಿತ್ರಗಳ ಮೂಲಕ ತಿಳಿಸಿಕೊಟ್ಟರು. ಇದಲ್ಲದೇ ಶುದ್ಧ ಹಾಲು ಉತ್ಪಾದನೆ, ಹಾಲಿನ ಶುದ್ದತೆ ಪರೀಕ್ಷಿಸುವ ಸರಳ ವಿಧಾನಗಳು, ಸಮತೋಲನ ಆಹಾರಾದಿ ಹಲವು ಉಪಯುಕ್ತ ವಿಚಾರಗಳನ್ನು ಹಂಚಿಕೊಂಡು ರೈತರಿಗೆ ಈ ಅಂತರ್ಜಾಲ ಕಾರ್ಯಕ್ರಮದ ಮೂಲಕ ಮಾರ್ಗದರ್ಶನ ನೀಡಿದರು.ಕಾರ್ಯಕ್ರಮದ ಸಂಯೋಜಕರಾದ ಶ್ರೀನಿವಾಸ್ ಹೆಚ್ ಹುಲಕೋಟಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ರೈತ ಮಹನೀಯರಿಗೂ ಮತ್ತು ಅಧಿಕಾರಿಗಳಿಗೂ ಸ್ವಾಗತಿಸಿ ವಂದಿಸಿದರು.

"ಉಡುಪಿ ಜಿಲ್ಲೆಯಲ್ಲಿ ಬಿದಿರು ಕೃಷಿ" ಯ ಅಂತರ್ಜಾಲ ತರಬೇತಿ ಕಾರ್ಯಕ್ರಮ

ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯ, ಶಿವಮೊಗ್ಗ, ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ, ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ, ಮತ್ತು ತೋಟಗಾರಿಕಾ ಇಲಾಖೆ, ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ಆಝಾಧಿ ಕಾ ಅಮೃತ ಮಹೋತ್ಸವ ದ ಅಂಗವಾಗಿ "ಉಡುಪಿ ಜಿಲ್ಲೆಯಲ್ಲಿ ಬಿದಿರು ಕೃಷಿ" ಯ ಅಂತರ್ಜಾಲ ತರಬೇತಿ ಕಾರ್ಯಕ್ರಮವು ದಿನಾಂಕ 17.06.2021 ರಂದು ಆಯೋಜಿಸಲಾಗಿತ್ತು.

ಡಾ. ರಾಮಕೃಷ್ಣ ಹೆಗ್ಡೆ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕೃಷಿ ಅರಣ್ಯ ವಿಭಾಗ, ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ, ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಬಿದಿರು ನಮ್ಮ ದೇಶದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದು ಇದನ್ನು ಮರ ಮಟ್ಟುಗಳ ಬದಲಿಗೆ ಉಪಯೋಗಿಸುತ್ತಿದ್ದು, ಕಟ್ಟಡಗಳ ನಿರ್ಮಾಣ, ಪಿಠೋಪಕರಣಗಳು, ಪೇಪರ್ ಮತ್ತು ಪಾಲಿವುಡ್‌ನಲ್ಲಿ ಬಳಸುತ್ತಾರೆ. ನಮ್ಮ ದೇಶದಲ್ಲಿ ಸುಮಾರು 136 ಬಿದಿರು ತಳಿಗಳಿದ್ದು ಅವುಗಳಲ್ಲಿ ಕೆಲವು ತಳಿಗಳನ್ನು ಮಾತ್ರ ವಾಣಿಜ್ಯವಾಗಿ ಬೆಳೆಸಲಾಗುತ್ತಿದೆ. ಆದುದರಿಂದ ತಳಿಗಳ ಆಯ್ಕೆ, ಉತ್ತಮ ನಿರ್ವಹಣೆ, ಖಾಲಿ ಜಾಗದ ಸದ್ಬಳಕೆ ಅತೀ ಅವಶ್ಯಕ ಎಂದು ತಿಳಿಸಿ, ಭೂಮಿಯ ಆಯ್ಕೆ, ತಳಿಗಳು, ಗಿಡಗಳ ನಾಟಿ ಮತ್ತು ನಿರ್ವಹಣೆ, ಹಿಳ್ಳೆಗಳ ನಿರ್ವಹಣೆ, ಪೋಷಕಾಂಶಗಳ ನಿರ್ವಹಣೆ, ಬೆಂಕಿ ಮತ್ತು ದನಕರುಗಳಿಂದ ಸಂರಕ್ಷಣೆ, ತೆಳುವುಗೊಳಿಸುವಿಕೆ, ನೀರಾವರಿ ಮತ್ತು ರೋಗ ನಿರ್ವಹಣೆಯ ಬಗ್ಗೆ ಸಚಿತ್ರಗಳ ಮೂಲಕ ಸವಿವರವಾಗಿ ತಿಳಿಸಿದರು. ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಯುತ. ಎಲ್ ಹೇಮಂತ್ ಕುಮಾರ್, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ತೋಟಗಾರಿಕಾ ಇಲಾಖೆ, ಉಡುಪಿ ತಾಲೂಕು, ರವರು ರಾಷ್ಟ್ರೀಯ ಬಿದಿರು ಮಿಷನ್ ಅಡಿಯಲ್ಲಿ ರೈತರಿಗೆ ಸಿಗುವ ಸೌಲಭ್ಯಗಳ ಬಗ್ಗೆ ವಿವರಿಸಿ, ರೈತರು ಬಿದಿರು ಕೃಷಿ ಮಾಡಲು ಮನಸ್ಸು ಮಾಡಬೇಕು ಎಂದು ತಿಳಿಸಿ ಮುಂದಿನ ದಿನಗಳಲ್ಲಿ ರೈತರ ಒಕ್ಕೂಟ ರಚನೆ ಮತ್ತು ಸೂಕ್ತ ಮಾರುಕಟ್ಟೆ ಕಲ್ಪಿಸುವ ಬಗ್ಗೆ ಇಲಾಖೆಯು ಸದಾ ರೈತರ ಜೊತೆಗಿರುತ್ತದೆ ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬಿದಿರು ಮತ್ತು ಶ್ರೀಗಂಧ ಬೆಳೆಗಾರರ ಅಧ್ಯಕ್ಷರಾದ ಶ್ರೀಯುತ ಈಶ್ವರಪ್ಪ ಮತ್ತು ಉಪಾಧ್ಯಕ್ಷರಾದ ಶ್ರೀಯುತ ವಿಶ್ವ ಕುಮಾರ್ ರವರು ಪಾಲ್ಗೊಂಡು ಬಿದಿರು ಮತ್ತು ಶ್ರೀಗಂಧ ಕೃಷಿಯಿಂದ ರೈತರಿಗಾಗುವ ಲಾಭಗಳ ಬಗ್ಗೆ ತಾವು ಬೆಳೆದ ಬೆಳೆಗಳ ಕುರಿತಾಗಿ ತಮ್ಮ ಅನುಭವ ಹಂಚಿಕೊಂಡರು.

ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರದ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಬಿ ಧನಂಜಯ ರವರು ಬಿದಿರು ಕೃಷಿಯ ಮಹತ್ವ , ಅದರ ಉಪಯೋಗಗಳು ಮತ್ತು ಹಡಿಲು ಭೂಮಿ ಸದ್ಬಳಕೆ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಪಾದಕರು: ಡಾ. ಬಿ. ಧನಂಜಯ
ಸಹ ಸಂಪಾದಕರು: ಡಾ. ಚೈತನ್ಯ ಹೆಚ್. ಎಸ್., ಡಾ. ಎನ್. ಈ. ನವೀನ್, ಡಾ. ಜಯ ಪ್ರಕಾಶ್ ಆರ್., ಶ್ರೀ ಶ್ರೀನಿವಾಸ ಹೆಚ್. ಹುಲಕೋಟಿ, ಡಾ. ಸಚಿನ್ ಯು. ಎಸ್.
ಅಕ್ಷರ ಜೋಡಣೆ : ಶ್ರೀಮತಿ ಸುಷ್ಮಾ ಮತ್ತು ಶ್ರೀಮತಿ ಶೈಲಜ
ಪ್ರಕಾಶಕರು: ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ–576213
ದೂರವಾಣಿ ಸಂಖ್ಯೆ: 0820–2563923, Email: kvkudupi@gmail.com, Website: https//mail.icar.gov.in/

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ
ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ
ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ - 576 213

ಕರಾವಳಿ ಕೃಷಿ

ತ್ರೈಮಾಸಿಕ ಕೃಷಿಕರ ವಾರ್ತಾ ಪತ್ರಿಕೆ

ಅಕ್ಟೋಬರ್ – ಡಿಸೆಂಬರ್ 2021 ಸಂಪುಟ–11, ಸಂಚಿಕೆ–3

ಕೃಷಿ ಮಹೋತ್ಸವ–2021

ಕೃಷಿಯೇ ನಮ್ಮ ಮೂಲ ಕಸುಬು, ಜೀವನಕ್ಕೆ ಆಧಾರಸ್ತಂಭ. ಕೋವಿಡ್ ಸಮಯದಲ್ಲಿ ಜನತೆಗೆ ಕೃಷಿ ಕ್ಷೇತ್ರದ ಮೇಲೆ ಆಸಕ್ತಿ ಹೆಚ್ಚಾಗುತ್ತಿದ್ದು, ಇದರೊಂದಿಗೆ ಕೃಷಿ ಪ್ರದೇಶದ ವಿಸ್ತರಣೆ ಕೂಡಾ ಆಗಬೇಕು ಎಂದು ಸಚಿವ ವಿ ಸುನಿಲ್ ಕುಮಾರ್ ಹೇಳಿದರು.

ಬ್ರಹ್ಮಾವರ ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿ ಶುಕ್ರವಾರ ಶಿವಮೊಗ್ಗ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಶಿವಮೊಗ್ಗ, ಬ್ರಹ್ಮಾವರ ಮತ್ತು ಉಳ್ಳಾಲದ ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಬ್ರಹ್ಮಾವರ ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ಡಿಪ್ಲೋಮಾ ಮಹಾವಿದ್ಯಾಲಯ, ಕೊಚ್ಚಿನ್ ಗೇರು ಮತ್ತು ಕೊಕೊ ಅಭಿವೃದ್ಧಿ ನಿರ್ದೇಶನಾಲಯದ ಮತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ನಡೆದ ಕೃಷಿ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕೋವಿಡನಿಂದಾಗಿ ಎಲ್ಲ ಕ್ಷೇತ್ರಗಳಿಗೂ ಹೊಡೆತ ಬಿದ್ದಿದೆ. ಆದರೆ ಕೃಷಿ ಕ್ಷೇತ್ರ ತನ್ನ ವ್ಯಾಪಕತೆ ವಿಸ್ತರಿಸಿಕೊಂಡಿರುವುದು ಒಳ್ಳೆಯ ಬೆಳವಣಿಗೆ. ಈ ಬಾರಿ ಜಿಲ್ಲೆಯಲ್ಲಿ ಶೇ 7 ರಷ್ಟು ಹೆಚ್ಚಿಗೆ ಬಿತ್ತನೆ ನಡೆದಿದೆ. ಕಾರ್ಕಳ ಕಜೆ ತಳಿಯ ಕುರಿತಂತೆ ಒಂದೂವರೆ ವರ್ಷದಿಂದ ಸಂಶೋಧನೆಗಳು ನಡೆಯುತ್ತಿದ್ದು, ಈ ತಳಿಯ ತಾಂತ್ರಿಕ ತೊಡಕುಗಳನ್ನು ನಿವಾರಿಸಿ, ಶೀಘ್ರದಲ್ಲಿ ಇದನ್ನು ಅಧೀಕೃತವಾಗಿ ಕೃಷಿ ಇಲಾಖೆಗೆ ಸೇರ್ಪಡೆಗೊಳಿಸುವ ಪ್ರಯತ್ನ ನಡೆಯುತ್ತಿವೆ ಎಂದರು. ಸಹ್ಯಾದ್ರಿ ಬ್ರಹ್ಮ, ಸಹ್ಯಾದ್ರಿ ಪಂಚಮುಖಿ, ಕಜೆ 25–9 ತಳಿಗಳನ್ನು ಸಚಿವರು ಬಿಡುಗಡೆ ಮಾಡಿದರು.

ರೈತರ ಮಕ್ಕಳಿಗಾಗಿ ಹಾಗೂ ಕೃಷಿ ಡಿಪ್ಲೋಮಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಿಗಾಗಿ ನಿರ್ಮಿಸಲಾಗಿರುವ ವಿದ್ಯಾರ್ಥಿ ನಿಲಯವನ್ನು ಸಚಿವ ಸುನಿಲ್ ಕುಮಾರ್ ಉದ್ಘಾಟಿಸಿದರು. ಭತ್ತದ ಕೃಷಿಯಲ್ಲಿ ಸಾಧನೆ ಮಾಡಿದ ರೈತರಾದ ಗಿಳಿಯಾರಿನ ಭರತ್ ಕುಮಾರ್ ಶೆಟ್ಟಿ, ಬಾರ್ಕೂರಿನ ಬಿ ಸೀತಾರಾಮ ಶೆಟ್ಟಿ, ಬ್ರಹ್ಮಾವರ ಬಿರ್ತಿಯ ರಾಮ ಗೊಲ್ಲ ಮತ್ತು ಚಾಂತಾರು ಅಗ್ರಹಾರದ ಗುಲಾಬಿ ನಾಯರಿ ಅವರನ್ನು ಸನ್ಮಾನಿಸಲಾಯಿತು. ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿವಿಯ ಶಿಕ್ಷಣ ನಿರ್ದೇಶಕ ಎಂ ಹನುಮಂತಪ್ಪ ಡಿಪ್ಲೋಮಾ ಕೃಷಿ ಪ್ರಮಾಣ ಪತ್ರ ವಿತರಿಸಿದರು. ಶಿವಮೊಗ್ಗ ವಿ ವಿ ಯ ಡಾ. ಮೃತ್ಯುಂಜಯ ಸಿ ವಾಲಿ, ಡಾ. ಬಿ ಹೇಮ್ಲಾ ನಾಯಕ್, ಶಿವಶಂಕರ ತಾಂತ್ರಿಕ ಕೈಪಿಡಿಗಳನ್ನು ಬಿಡುಗಡೆಗೊಳಿಸಿದರು.

ಶಾಸಕ ರಘುಪತಿ ಭಟ್ ಅಧ್ಯಕ್ಷತೆ ವಹಿಸಿ ಕೃಷಿಯಲ್ಲಿ ಯಾಂತ್ರಿಕೃತೆ ಅಗತ್ಯ ಇದರಿಂದ ಮಾತ್ರ ಲಾಭ ಗಳಿಸಲು ಸಾಧ್ಯ. ಜಿಲ್ಲೆಯಲ್ಲಿ ಹಡಿಲು ಭೂಮಿ ಯೋಜನೆ ಯಶಸ್ವಿಯಾಗಿದ್ದು ರೈತರಿಗೆ ಇದು ಪ್ರೇರಣೆಯಾಗಿದೆ ಎಂದರು. ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಟ್ಟಾರು ರತ್ನಾಕರ ಹೆಗ್ಡೆ, ಚಾಂತಾರು ಗ್ರಾಮ ಪಂಚಾಯಿತಿ ಅಧ್ಯಕ್ಷೆ, ಮೀರಾ ಸದಾನಂದ ಪೂಜಾರಿ, ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ದೊಡ್ಡೇಗೌಡ ಸಿ ಪಾಟೀಲ್, ವೀರಭದ್ರಪ್ಪ ಪೂಜಾರಿ, ಡಾ. ಎಸ್ ವಿ ಪಾಟೀಲ್, ಬಿ ಶಿವರಾಮ್, ಕೆ ನಾಗರಾಜ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆಂಪೇಗೌಡ, ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ಭುವನೇಶ್ವರಿ , ಪಶುಪಾಲನಾ ಇಲಾಖೆ ಉಪನಿರ್ದೇಶಕ ಶಂಕರ್ ಶೆಟ್ಟಿ, ವಿದ್ಯಾರ್ಥಿ ಕಲ್ಯಾಣದ ಡೀನ್ ಡಾ. ಎನ್ ಶಿವಶಂಕರ್, ಪ್ರಗತಿಪರ ಕೃಷಿಕ ಯಡ್ತಾಡಿ ಸತೀಶ್ ಕುಮಾರ್ ಶೆಟ್ಟಿ ಇದ್ದರು. ಶಿವಮೊಗ್ಗ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ ಕೆ ನಾಯ್ಕ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹ ಸಂಶೋಧನಾ ನಿರ್ದೇಶಕ ಡಾ. ಲಕ್ಷ್ಮಣ ಸ್ವಾಗತಿಸಿದರು. ಕೆ.ವಿ.ಕೆ.ಬ್ರಹ್ಮಾವರದ ಮುಖ್ಯಸ್ಥರಾದ ಡಾ. ಬಿ ಧನಂಜಯ ವಂದಿಸಿದರು. ಹಿರಿಯ ಕ್ಷೇತ್ರ ಅಧೀಕ್ಷಕ ಡಾ. ಎಂ ಶಂಕರ್ ನಿರೂಪಿಸಿದರು.

ಸುಧಾರಿತ ಕಾರ್ಲ ಕಜೆ ಭತ್ತದ ಬೆಳೆ ಕ್ಷೇತ್ರೋತ್ಸವ

ರೊಟ್ಟಿ ತಿಂದವನು ಗಟ್ಟಿಯಾಗಿರುತ್ತಾನೆ, ಅನ್ನ ತಿಂದವನು ಸಪೂರವಾಗುತ್ತಾನೆ ಎಂಬ ಗಾದೆ ಮಾತೊಂದಿದೆ. ಆದರೆ ಕಾರ್ಲ ಕಜೆ ಅನ್ನದಲ್ಲಿ ಪೋಷಕಾಂಶ ಹೇರಳವಾಗಿದೆ ಎಂದು ಶಿವಮೊಗ್ಗ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಮೃತ್ಯುಂಜಯ ಸಿ ವಾಲಿ ಹೇಳಿದರು.

ಅವರು ಆಕ್ಟೋಬರ್ 10 ರಂದು ಕುಕ್ಕುಂದೂರು ಗ್ರಾಮದ ಪ್ರಗತಿಪರ ಕೃಷಿ ಎಂ. ಜಗನ್ನಾಥ ಪೈ ಅವರ ಮನೆ ಆವರಣದಲ್ಲಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ ಶಿವಮೊಗ್ಗ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಬ್ರಹ್ಮಾವರ ಮತ್ತು ಅಖಿಲ ಭಾರತೀಯ ಸಮನ್ವಯ ಭತ್ತ ಅಭಿವೃದ್ಧಿ ಯೋಜನೆ ಹೈದರಾಬಾದ್ ಇವರ ಸಹಯೊಗದಲ್ಲಿ ನಡೆದ ಸುಧಾರಿತ ಕಾರ್ಲ ಕಜೆ ಭತ್ತದ ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕುಕ್ಕುಂದೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಶಶಿಮಣಿ ಸಂಪತ್ ಅಧ್ಯಕ್ಷತೆ ವಹಿಸಿದ್ದರು. ಇಲಾಖಾಧಿಕಾರಿಗಳಾದ ಡಾ. ಬಿ ಹೇಮ್ಲಾ ನಾಯಕ್ , ಡಾ. ಎಸ್. ಯು ಪಾಟೀಲ್, ಹೆಚ್ ಕೆಂಪೇಗೌಡ, ಅಬ್ದುಲ್ ಮಜೀದ್, ಕಾರ್ಕಳ ತೋಟಗಾರಿಕೆ ರೈತ ಉತ್ಪಾದಕರ ಕಂಪನಿ ನಿ.ದ ಅಧ್ಯಕ್ಷ ಅಂತೋನಿ ಡಿ ಸೋಜಾ, ಪಂಚಾಯತ್ ಉಪಾಧ್ಯಕ್ಷ ಅನಿಲ್ ಪೂಜಾರಿ, ಡಾ. ಕೆ ವಿ ಸುಧೀರ್ ಕಾಮತ್, ಡಾ. ಬಿ ಧನಂಜಯ, ಶ್ರೀನಿವಾಸ್ ಬಿ. ಎ, ನವೀನ್ ಚಂದ್ರ ಜೈನ್, ವಿನೋದ್ ಆರ್ ಎ, ಡಾ. ಜಯಪ್ರಕಾಶ್ ಎಸ್ ಎಂ, ಡಾ. ಶಂಕರ್ ಎಂ, ಪ್ರಗತಿಪರ ಕೃಷಿ ಮಹಿಳೆ ಜ್ಯೋತಿ ಜೆ ಪೈ, ಡಾ. ಶ್ರೀದೇವಿ ಜಕ್ಕೆರಾಳ ಉಪಸ್ಥಿತರಿದ್ದರು.

ಗಣೇಶ್ ಗಂಗೊಳ್ಳಿ ಮತ್ತು ತಂಡದವರು ರೈತ ಗೀತೆ ಹಾಡಿದರು. ಹೃದ್ವಿ ಭಟ್ ಹಾಗೂ ವೇದ ಭಟ್ ಪ್ರಾರ್ಥಿಸಿದರು. ಸಹ ಸಂಶೋಧನಾ ನಿರ್ದೇಶಕರಾದ ಡಾ. ಲಕ್ಷ್ಮಣ್ ಸ್ವಾಗತಿಸಿ, ಗಣೇಶ್ ಬೆಳ್ವೆ ನಿರೂಪಿಸಿದರು. ಡಾ. ಬಿ. ಧನಂಜಯ್ ಬಿ ವಂದಿಸಿದರು.

ವಿಶ್ವ ಮಣ್ಣು ದಿನಾಚರಣೆ

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ, ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ, ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ, ಉಡುಪಿ, ಕೃಷಿ ಪರಿಕರ ಮಾರಾಟಗಾರರಿಗಾಗಿ ಕೃಷಿ ವಿಸ್ತರಣಾ ಸೇವೆಗಳ ಡಿಪ್ಲೋಮಾ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಣ್ಣು ದಿನಾಚರಣೆ ಕಾರ್ಯಕ್ರಮವು ದಿನಾಂಕ 05.12.2021 ರಂದು ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರದಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಉದ್ಘಾಟಣೆಯನ್ನು ಶ್ರೀ. ಕೆಂಪೇಗೌಡ, ಜಂಟಿ ಕೃಷಿ ನಿರ್ದೇಶಕರು, ಉಡುಪಿ ಜಿಲ್ಲೆ ನೇರವೇರಿಸಿ ಮಾತನಾಡುತ್ತ ರೈತರಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆಯ ಮಹತ್ವವನ್ನು ಮನದಟ್ಟು ಮಾಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀ. ಸೂರ್ಯಕಾಂತ್ ಬಿರಾದರ್, ಉಪ ಕೃಷಿ ನಿರ್ದೇಶಕರು, ಉಡುಪಿ ಜಿಲ್ಲೆ ಮಾತನಾಡಿ ಮಣ್ಣಿನ ಆರೋಗ್ಯವನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಬೇಕಾಗಿ ಕರೆ ಕೊಟ್ಟರು.

ಇನ್ನೋರ್ವ ಮುಖ್ಯ ಅತಿಥಿಗಳಾದ ಕೆ.ವಿ.ಕೆ.,ಬ್ರಹ್ಮಾವರದ ಮುಖ್ಯಸ್ಥರಾದ ಡಾ. ಧನಂಜಯ ಬಿ ಅವರು ಮಾತನಾಡಿ, ಕರಾವಳಿಗೆ ಮಾರಕವಾದ ಹುಳಿ ಮಣ್ಣಿನ ನಿರ್ವಹಣೆಯನ್ನು ವೈಜ್ಞಾನಿಕ ರೂಪದಲ್ಲಿ ನಿರ್ವಹಣೆ ಮಾಡಿ ಮಣ್ಣಿನ ಆರೋಗ್ಯವನ್ನು ಕಾಪಾಡಬೇಕಾಗಿ ರೈತರಲ್ಲಿ ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿ ಡಿಪ್ಲೋಮಾ ಮಹಾ ವಿದ್ಯಾಲಯದ ಪ್ರಾಂಶುಪಾಲರಾದ, ಡಾ. ಸುಧೀರ್ ಕಾಮತ್‌ರವರು ವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಡಾ. ಶಂಕರ್ ಎಂ, ಹಿರಿಯ ಕ್ಷೇತ್ರ ಅಧೀಕ್ಷಕರು, ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಬ್ರಹ್ಮಾವರ , ಡಾ. ಜಯಪ್ರಕಾಶ್ ಎಸ್ ಎಂ, ವಿಜ್ಞಾನಿಗಳು (ಮಣ್ಣು ವಿಜ್ಞಾನ) ಹಾಗೂ ಡಾ. ನವೀನ್ ಎನ್ ಈ, ವಿಜ್ಞಾನಿಗಳು (ಬೇಸಾಯಶಾಸ್ತ್ರ) ಉಪಸ್ಥಿತರಿದ್ದರು.

ಡಾ. ಜಯಪ್ರಕಾಶ್ ಆರ್, ವಿಜ್ಞಾನಿಗಳು(ಮಣ್ಣು ವಿಜ್ಞಾನ) ಎಲ್ಲರನ್ನು ಸ್ವಾಗತಿಸಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಡಾ. ಕಾಂತರಾಜ್, ವಿಜ್ಞಾನಿಗಳು (ಮಣ್ಣು ವಿಜ್ಞಾನ) ವಂದಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 97 ರೈತರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಇವರಿಂದ ನೈಸರ್ಗಿಕ ಕೃಷಿ ಕುರಿತಾಗಿ ರೈತರನ್ನು ಉದ್ದೇಶಿಸಿ ನೇರ ಸಂವಾದ

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ, ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ, ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಬ್ರಹ್ಮಾವರ, ಕೃಷಿ ಡಿಪ್ಲೋಮಾ ಮಹಾ ವಿದ್ಯಾಲಯ, ಬ್ರಹ್ಮಾವರ ಮತ್ತು ನೈಸರ್ಗಿಕ ಕೃಷಿ ಯೋಜನೆ, ಬ್ರಹ್ಮಾವರ ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ 16.12.2021 ರಂದು ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಇವರಿಂದ ರೈತರನ್ನು ಉದ್ದೇಶಿಸಿ ನೈಸರ್ಗಿಕ ಕೃಷಿ (ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ) ಯ ಕುರಿತಾಗಿ ಸಂವಾದದ ನೇರ ಪ್ರಸಾರ ಕಾರ್ಯಕ್ರಮವನ್ನು ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರದಲ್ಲಿ ಆಯೋಜಿಸಲಾಗಿತ್ತು. ಸಾವಯವ ಕೃಷಿ ಯೋಜನೆ, ಕರ್ನಾಟಕ ಸರ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ ನೈಸರ್ಗಿಕ ಕೃಷಿಗೆ ಸರಕಾರದಿಂದ ದೊರೆಯುತ್ತಿರುವ ಸೌಲಭ್ಯಗಳ ಬಗ್ಗೆ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಲಕ್ಷ್ಮಣ, ಸಹ ಸಂಶೋಧನಾ ನಿರ್ದೇಶಕರು, ವ.ಕೃ.ತೋ.ಸಂ.ಕೇಂ., ಬ್ರಹ್ಮಾವರ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಡಾ. ಸುಧೀರ್ ಕಾಮತ್ ಕೆ ವಿ, ಪ್ರಾಂಶುಪಾಲರು, ಕೃಷಿ ಡಿಪ್ಲೋಮಾ ಮಹಾವಿದ್ಯಾಲಯ, ಬ್ರಹ್ಮಾವರ, ಡಾ. ಬಿ ಧನಂಜಯ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೆ.ವಿ.ಕೆ., ಬ್ರಹ್ಮಾವರ, ಡಾ. ಎಂ ಶಂಕರ್ , ಹಿರಿಯ ಕ್ಷೇತ್ರ ಅಧೀಕ್ಷಕರು, ವ.ಕೃ.ತೋ.ಸಂ.ಕೇಂ.ಕೇ.,ಬ್ರಹ್ಮಾವರ, ಕುಮಾರಿ. ನವ್ಯಾ ಜಿಲ್ಲಾ ವ್ಯವಸ್ಥಾಪಕರು, NRLM, ಉಡುಪಿ ಹಾಗೂ ಕು. ಜಯಮಾಲ, ಯುವ ವೃತ್ತಿಪರರು, ಜಿಲ್ಲಾ ಪಂಚಾಯತ್, ಉಡುಪಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕೆ.ವಿ.ಕೆ., ಬ್ರಹ್ಮಾವರದ ಮಣ್ಣು ವಿಜ್ಞಾನಿಗಳಾದ ಡಾ. ಜಯಪ್ರಕಾಶ್ ಆರ್ ಕಾರ್ಯಕ್ರಮದ ಕುರಿತಾಗಿ ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು. ಡಾ. ಸುನಿಲ್ ಕುಮಾರ್, ಸಹ ಸಂಶೋಧಕರು, ನೈಸರ್ಗಿಕ ಕೃಷಿ ಯೋಜನೆ, ಬ್ರಹ್ಮಾವರ ಇವರು ಸರ್ವರಿಗೂ ವಂದಿಸಿದರು. ಡಾ. ಸಚಿನ್ ಯು. ಎಸ್, ವಿಜ್ಞಾನಿಗಳು (ಸಸ್ಯ ಸಂರಕ್ಷಣೆ) ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮದ ನಂತರ ಪ್ರಧಾನ ಮಂತ್ರಿಯವರ ನೇರ ಸಂವಾದ ಕಾರ್ಯಕ್ರಮವನ್ನು ವೀಕ್ಷಿಸಲಾಯಿತು.

ಜೈ ಜವಾನ್ ಜೈ ಕಿಸಾನ್

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ ಶಿವಮೊಗ್ಗ, ಭಾರತೀಯ ಕೃಷಿ ಅನುಸಂದಾನ ಪರಿಷತ್ ನವದೆಹಲಿ, ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ ಬ್ರಹ್ಮಾವರ, ಕೃಷಿ ಇಲಾಖೆ ಉಡುಪಿ, ವ್ಯವಸಾಯ ಸೇವಾ ಸಹಕಾರಿ ಸಂಘ, ಉಪ್ಪೂರು ಇವರ ಸಂಯುಕ್ತ ಆಶ್ರಯದಲ್ಲಿ ಜೈ ಜವಾನ್ ಜೈ ಕಿಸಾನ್ ಕಾರ್ಯಕ್ರಮವನ್ನು 23.12.2021 ರಂದು ಉಪ್ಪೂರು ಗ್ರಾಮ, ಉಡುಪಿ ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು.

ಶ್ರೀ ಸೂರ್ಯಕಾಂತ ಬಿರಾದರ, ಉಪಕೃಷಿ ನಿರ್ದೇಶಕರು, ಕೃಷಿ ಇಲಾಖೆ ಉಡುಪಿ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ರೈತರ ಏಳಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ ಭಾರತದ 5ನೇ ಪ್ರಧಾನ ಮಂತ್ರಿ ಗಳಾದ ಶ್ರೀ. ಚೌದ್ರಿ ಚರನ್ ಸಿಂಗ್ ಅವರನ್ನು ನೆನೆದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎನ್ ರಮೇಶ ಶೆಟ್ಟಿ ಅಧ್ಯಕ್ಷರು, ವಿವಿಎಸ್‌ಎನ್ ಬ್ಯಾಂಕ್, ಉಪ್ಪೂರು ಇವರು ವಹಿಸಿದ್ದು 3% ಬಡ್ಡಿಯಲ್ಲಿ ಲಭ್ಯವಿರುವ ಕೃಷಿ ಸಾಲದ ಬಗ್ಗೆ ರೈತರಿಗೆ ತಿಳಿಸಿದರು. ಡಾ. ಧನಂಜಯ ಬಿ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಮತ್ತು ಡಾ. ಸಚಿನ್ ಯು. ಎಸ್, ವಿಜ್ಞಾನಿಗಳು (ಸಸ್ಯ ಸಂರಕ್ಷಣೆ) ಕೆವಿಕೆ ಬ್ರಹ್ಮಾವರ, ಸಂಪನ್ಮೂಲ ವ್ಯಕ್ತಿಗಳಾಗಿ ರೈತರಿಗೆ ಕಾರ್ಯಕ್ರಮದ ಆಯೋಜನೆಯ ಮಹತ್ವದ ಬಗ್ಗೆ ತಿಳಿಸಿದರು. ಡಿಎಫ್‌ಐ ಹಳ್ಳಿಗಳ ರೈತರ ಯಶೋಗಾಥೆಗಳನ್ನು ತಿಳಿಸುವ ಮೂಲಕ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿನ ಕೀಟ ಮತ್ತು ರೋಗಗಳ ಪರಿಣಾಮಕಾರಿ ನಿರ್ವಹಣೆಗಾಗಿ ರಬಿ ಋತುವಿನಲ್ಲಿ ಕೈಗೊಳ್ಳಬೇಕಾದ ಸಸ್ಯ ಸಂರಕ್ಷಣಾ ಕ್ರಮಗಳ ಬಗ್ಗೆ ರೈತರಿಗೆ ವಿವರಿಸಿದರು. ಈ ಕಾರ್ಯಕ್ರಮವನ್ನು ಕೆವಿಕೆ ಬ್ರಹ್ಮಾವರ ಮತ್ತು ಕನ್ಯಾನ ಗ್ರಾಮ ವಂಡ್ಸೆ ಹೊಬ್ಳಿ ಕುಂದಾಪುರ ತಾಲೂಕು ನಲ್ಲಿ ನಡೆಸಲಾಯಿತು. ಒಟ್ಟು 165 ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಸಂಪಾದಕರು: ಡಾ. ಬಿ. ಧನಂಜಯ
ಸಹ ಸಂಪಾದಕರು: ಡಾ. ಚೈತನ್ಯ ಹೆಚ್. ಎಸ್., ಡಾ. ಎನ್. ಈ. ನವೀನ್, ಡಾ. ಜಯ ಪ್ರಕಾಶ್ ಆರ್., ಶ್ರೀ ಶ್ರೀನಿವಾಸ ಹೆಚ್. ಹುಲಕೋಟಿ, ಡಾ. ಸಚಿನ್ ಯು. ಎಸ್.
ಅಕ್ಷರ ಜೋಡಣೆ : ಶ್ರೀಮತಿ ಸುಷ್ಮಾ ಮತ್ತು ಶ್ರೀಮತಿ ಶೈಲಜ
ಪ್ರಕಾಶಕರು: ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ, ಉಡುಪಿ–576213
ದೂರವಾಣಿ ಸಂಖ್ಯೆ: 0820–2563923, Email: kvkudupi@gmail.com, Website: https//mail.icar.gov.in/